# ಪರ್ಯಾಯ ಶೈಕ್ಷಣಿಕ ಯೋಜನೆ 2021–22

**ತರಗತಿ:– 8** **ಮಾಹೆ : ನವೆಂಬರ್ 2021** **ವಿಷಯ: ಪ್ರಥಮ ಭಾಷೆ ಕನ್ನಡ**

| ತಿಂಗಳು/ವಾರ | ಪ್ರಮುಖ ಕಲಿಕಾ ಸಾಮರ್ಥ್ಯಗಳು | ಕಲಿಕಾ ಚಟುವಟಿಕೆಗಳು | ಮೌಲ್ಯಮಾಪನ |
|---|---|---|---|
| ನವೆಂಬರ್ ಮೊದಲನೆಯ ವಾರ | **ಗದ್ಯಪಾಠ:**<br>04 ಸಾರ್ಥಕ ಬದುಕಿನ ಸಾಧಕ<br>➢ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ವ್ಯಕ್ತಿ ಚಿತ್ರದ ಪ್ರಕಾರವನ್ನು ಅರ್ಥೈಸಿಕೊಳ್ಳುವರು. | ➢ ಶಿಕ್ಷಕರು ವಿವಿಧ ಗಣ್ಯರ, ಸಾಹಿತಿಗಳ, ಕವಿಗಳ ವ್ಯಕ್ತಿಚಿತ್ರವನ್ನು ಪರಿಚಯಿಸುವರು. | ➢ ನೀವು ತಿಳಿದಿರುವ ಜೀವನ ಚರಿತ್ರೆ ಮತ್ತು ಆತ್ಮಕತೆಗಳನ್ನು ಪಟ್ಟಿ ಮಾಡಿರಿ. |
| | ➢ ಲೇಖಕರಾದ ಎನ್ ಎಸ್ ಲಕ್ಷ್ಮಿನಾರಾಯಣ ಭಟ್ಟ ಅವರ ಪರಿಚಯವನ್ನು ಮಾಡಿಕೊಳ್ಳುವರು. | ➢ ಚರ್ಚೆ ವಿಧಾನದ ಮೂಲಕ ಎನ್ ಎಸ್ ಲಕ್ಷ್ಮಿನಾರಾಯಣ ಭಟ್ಟ ಅವರ ಪರಿಚಯವನ್ನು ಮಾಡಿಸುವುದು. | ➢ ಎನ್.ಎಸ್.ಲಕ್ಷ್ಮಿನಾರಾಯಣ ಭಟ್ಟ ಅವರ ಪರಿಚಯವನ್ನು ವಾಕ್ಯರೂಪದಲ್ಲಿ ಬರೆಯಿರಿ. |
| | ➢ ಡಿ ವಿ ಜಿ ಯವರ ಬಗ್ಗೆ ದಿವಾನರುಗಳು ಹೊಂದಿದ್ದ ಅಭಿಪ್ರಾಯಗಳನ್ನು ತಿಳಿದುಕೊಳ್ಳುವರು. | ➢ ಪ್ರಸ್ತುತ ಡಿವಿಜಿತವರ ವ್ಯಕ್ತಿಚಿತ್ರದಲ್ಲಿ ಅವರ ಬಗ್ಗೆ ಮೈಸೂರಿನ ದಿವಾನರುಗಳು ಹೊಂದಿದ್ದ ಅಭಿಪ್ರಾಯಗಳನ್ನು ಮಕ್ಕಳಲ್ಲಿ ಚರ್ಚೆ ಮಾಡಿಸುವುದು. | ➢ ಡಿ ವಿ ಜಿ ಅವರ ಸ್ನೇಹಕ್ಕೆ ಹಾತೊರೆಯುತ್ತಿದ್ದ ಮೈಸೂರಿನ ದಿವಾನರು ಯಾರು? |
| ಎರಡನೆಯ ವಾರ | ➢ ಡಿ ವಿ ಜಿಯವರ ಬಾಲ್ಯ ಜನ್ಮ ಸ್ಥಳ, ಹಾಗು ಅವರ ಕುಟುಂಬದ ಬಗ್ಗೆ ತಿಳಿಯುವರು<br>➢ ಡಿ ವಿ ಜಿ ಅವರ ವಿದ್ಯಾಭ್ಯಾಸದ ಬಗ್ಗೆ ಅರಿತುಕೊಳ್ಳುವರು<br>➢ ಡಿ ವಿ ಜಿ ಮತ್ತು ವಿಶ್ವೇಶ್ವರಯ್ಯ ನವರ ಒಡನಾಟದ ಬಗ್ಗೆ ತಿಳಿದುಕೊಳ್ಳುವರು. | ➢ ವಿದ್ಯಾರ್ಥಿಗಳಿಂದ ಡಿ ವಿ ಜಿ ಅವರ ಪರಿಚಯವನ್ನು ಸಂಭಾಷಣೆ, ಚರ್ಚೆ ಮೂಲಕ ಮಾಡಿಸುವುದು.<br>➢ ರಸೂಲ್ ಖಾನ್ ಮತ್ತು ಡಿ ವಿ ಜಿ ಅವರ ನಡುವೆ ಇದ್ದ ಸಂಬಂಧವನ್ನು ಚರ್ಚೆ ಮಾಡಿಸುವುದು.<br>➢ ಡಿ ವಿ ಜಿ ಅವರು ಪತ್ರಕರ್ತರಾಗಿ ಮೈಸೂರು ದಸರಾ ಉತ್ಸವದಲ್ಲಿ ಭಾಗವಹಿಸಿದ್ದ ಸಂದರ್ಭವನ್ನು ಮತ್ತು ಅಂದು ಅವರು ಸರ್ಕಾರಕ್ಕೆ ದಿವಾನರು ನೀಡಿದ್ದ ಚೆಕ್ ಅನ್ನು ಹಿಂದಿರುಗಿಸಿದ ಔಚಿತ್ಯವನ್ನು ಮಕ್ಕಳು ತಿಳಿದು ಅವರ ವ್ಯಕ್ತಿತ್ವದ ಬಗ್ಗೆ ಮೌಲ್ಯಯುತವಾಗಿ ಮಾತನಾಡುವರು/ಚರ್ಚಿಸುವರು | ➢ ರಸೂಲ್ ಖಾನ್ ಯಾರು?<br>➢ ಡಿ ವಿ ಜಿ ಅವರ ಬಗ್ಗೆ ರಸೂಲ್ ಖಾನ್‌ರ ಹಠವೇನು?<br>➢ ಡಿ ವಿ ಜಿ ಯವರ ವಿಶ್ವೇಶ್ವರಯ್ಯನವರ ಬಳಿಗೆ ಬರಲು ಕಾರಣವೇನು? |

| | | | |
|---|---|---|---|
| | ➢ ಡಿ ವಿ ಜಿ ಯವರ ಮನೆಯ ಬಡತನದ ಬಗ್ಗೆ ತಿಳಿಯುವರು. | ➢ ಡಿವಿಜಿ ಹಾಗೂ ಅವರ ಪತ್ನಿಯ ನಡುವೆ ನಡೆದ ಸಂಭಾಷಣೆಯ ಬಗ್ಗೆ ಮಕ್ಕಳಲ್ಲಿ ಮಾತನಾಡಿಸುವುದು<br>➢ ಪಾಠ ಭಾಗದಲ್ಲಿ ಬಂದಿರುವ ಹೊಸ ಪದಗಳನ್ನು ಪಟ್ಟಿ ಮಾಡಿಸಿ, ಅರ್ಥ ಬರೆಸುವುದು.<br>➢ ಡಿ.ವಿ.ಜಿ ಅವರು ಬರೆದಿರುವ ಸಾಹಿತ್ಯ ಕೃತಿಗಳನ್ನು ಪಟ್ಟಿ ಮಾಡಿಸುವುದು. | ➢ ಡಿ ವಿ ಜಿ ಯವರ ಹೆಂಡತಿ ನೆಂಟರ ಮನೆಯ ಉತ್ಸವಕ್ಕೆ ಹೋಗಲು ಸಬೂಬು ಹೇಳಲು ಕಾರಣವೇನು?<br>➢ ನಿಮಗೆ ತಿಳಿದಿರುವ ಡಿ ವಿ ಜಿ ಅವರ ಒಂದು ಕಗ್ಗದ ಪದ್ಯವನ್ನು ಬರೆಯಿರಿ. |
| ಮೂರನೆಯ ವಾರ | **ವ್ಯಾಕರಣಾಂಶ:–**<br>➢ ನಾಮಪದದ ಪರಿಚಯವನ್ನು ಮಾಡಿಕೊಳ್ಳುವರು.<br>➢ ವಿಭಕ್ತಿ ಪ್ರತ್ಯಯದ ಬಗ್ಗೆ ತಿಳಿಯುವರು | ➢ ನಾಮ ವಾಚಕಗಳಿಗೆ ಪ್ರತಿಯೊಂದಕ್ಕು ಐದೈದು ಉದಾಹರಣೆಗಳನ್ನು ಬರೆಸುವುದು.<br>➢ ಈ ಪಾಠದಲ್ಲಿರುವ ಐದು ಪದಗಳನ್ನು ನೀಡಿ ಅವುಗಳಿಗೆ ವಿಭಕ್ತಿ ಪ್ರತ್ಯಯಗಳನ್ನು ಬರೆಸುವುದು. | ➢ ಅಭ್ಯಾಸ ಹಾಳೆ 1 ಮತ್ತು 2 |
| | **ಪದ್ಯಪಾಠ: 02 ಭರವಸೆ**<br>➢ ಸಾಹಿತ್ಯ ಪ್ರಕಾರಗಳಲ್ಲಿ ಒಂದಾದ ಭಾವಗೀತೆ ಪ್ರಕಾರವನ್ನು ತಿಳಿಯುವರು.<br>➢ ಕವಯಿತ್ರಿ ಬಿ ಟಿ ಲಲಿತಾ ನಾಯಕ್ ಅವರ ಪರಿಚಯ ಮಾಡಿಕೊಳ್ಳುವರು. | ➢ ದಲಿತ ಬಂಡಾಯ ಸಾಹಿತ್ಯದ ಇತರೆ ಗೀತೆಗಳನ್ನು ಕೇಳಿಸುವುದು ಮತ್ತು ಹಾಡಿಸುವುದು.<br>➢ ಪ್ರಶ್ನೋತ್ತರ ಮಾದರಿಯಲ್ಲಿ ಬಿ ಟಿ ಲಲಿತಾ ನಾಯಕ್ ಅವರ ಪರಿಚಯ ಮಾಡಿಸುವುದು. | ➢ ನಿಮಗೆ ಗೊತ್ತಿರುವ ಒಂದು ಭಾವಗೀತೆಯನ್ನು ಬರೆಯಿರಿ.<br>➢ ಬಿ ಟಿ ಲಲಿತಾ ನಾಯಕ್ ಅವರ ಕೃತಿಗಳನ್ನು ಪಟ್ಟಿ ಮಾಡಿರಿ. |
| | ➢ ಪದ್ಯದ ಸಾರಾಂಶವನ್ನು ಅರ್ಥೈಸಿಕೊಳ್ಳುವರು. | ➢ ಪದ್ಯದ ಸಾರಾಂಶವನ್ನು ವಿವರಿಸುವುದು.<br>➢ ವಿದ್ಯಾರ್ಥಿಗಳಿಂದ ಪದ್ಯದ ಸಾರಾಂಶವನ್ನು ಹೇಳಿಸುವುದು.<br>➢ ಪದ್ಯದಲ್ಲಿ ಬಂದಿರುವ ಹೊಸಪದಗಳನ್ನು ಪಟ್ಟಿ ಮಾಡಿಸುವುದು. | ➢ ಕವಯಿತ್ರಿ ಯಾವ ಭರವಸೆಯನ್ನು ಕವನದಲ್ಲಿ ವರ್ಣಿಸಿದ್ದಾರೆ?<br>➢ ಕೋಗಿಲೆಯು ಕುಕಿಲರಾಗವನ್ನು ಯಾವಾಗ ಬೆರೆಸಿತು ? |

| | | | |
|---|---|---|---|
| ನಾಲ್ಕನೆಯ ವಾರ | **ಪಠ್ಯಪೂರಕ ಅಧ್ಯಯನ:**<br>01 ಸಾರ್ಥಕ – ಪದ್ಯ<br>➢ ಲೇಖಕರಾದ ದಿನಕರ ದೇಸಾಯಿಯವರ ಬಗ್ಗೆ ತಿಳಿಯುವರು. | ➢ ಮನುಷ್ಯನ ಜೀವನ ಸಾರ್ಥಕವಾಗುವ ಬಗೆಯ ನಿದರ್ಶನಗಳನ್ನು ಮಕ್ಕಳಿಂದ ಹೇಳಿಸುವುದು<br>➢ ಸತ್ತಮೇಲಾದರೂ ನನ್ನ ದೇಹ ಸೇವೆಗೆ ಬಂದರೆ ಮನುಷ್ಯ ಜನ್ಮ ಸಾರ್ಥಕವಾಗುತ್ತದೆ. ನಾವು ಸ್ವಾರ್ಥವನ್ನು ನೆನೆಯದೆ ನಿಜವಾದ ಸೇವೆಯನ್ನು ಮಾಡುವಂತಾಗಬೇಕು.<br>➢ "ಪರೋಪಕಾರಾರ್ಥಂ ಇದಂ ಶರೀರಂ" ಈ ವಾಕ್ಯದ ಮೇಲೆ ಮಕ್ಕಳಿಂದ ಚರ್ಚೆ ಮಾಡಿಸುವುದು. | ➢ ದಿನಕರ ದೇಸಾಯಿಯವರು ತಾವು ಸತ್ತ ಮೇಲೂ ತನ್ನ ದೇಹದ ಬೂದಿಯು ಹೇಗೆ ಸಾರ್ಥಕವಾಗಬೇಕೆಂದು ಬಯಸಿದ್ದಾರೆ?<br>➢ ನೀವು ಬೇರೆಯವರಿಂದ ಪಡೆದಿರುವ ಉಪಕಾರವನ್ನು ನೆನೆಪಿಸಿಕೊಂಡು ಬರೆಯಿರಿ. |

ಸಾರ್ಥಕ ಬದುಕಿನ ಸಾಧಕ ಪಾಠದ ಸಂವೇದ ತರಗತಿಗಾಗಿ ಇಲ್ಲಿ ಕ್ಲಿಕ್ಕಿಸಿ, ಭಾಗ -1

https://www.youtube.com/watch?v=zj4HU7rWjc4

ಸಾರ್ಥಕ ಬದುಕಿನ ಸಾಧಕ ಪಾಠದ ಸಂವೇದ ತರಗತಿಗಾಗಿ ಇಲ್ಲಿ ಕ್ಲಿಕ್ಕಿಸಿ, ಭಾಗ -2

https://www.youtube.com/watch?v=-tDcLSeobq0

ಭರವಸೆ ಪದ್ಯ ಪಾಠದ ಸಂವೇದ ತರಗತಿಗಾಗಿ ಇಲ್ಲಿ ಕ್ಲಿಕ್ಕಿಸಿ,

https://www.youtube.com/watch?v=QN4qU_bNJWU

## ಪ್ರಥಮ ಭಾಷೆ ಕನ್ನಡ – ಎಂಟನೆಯ ತರಗತಿ, ನವೆಂಬರ್–2021
## ಗದ್ಯಪಾಠ – ಸಾರ್ಥಕ ಬದುಕಿನ ಸಾಧಕ – ಅಭ್ಯಾಸದ ಹಾಳೆ–01

**************************************************************************

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ.**

1. ಡಿ.ವಿ.ಜಿ ಅವರ ಹುಟ್ಟೂರು ಯಾವುದು?

**ಉತ್ತರ:–**

______________________________________________________________________.

2. ಡಿ.ವಿ.ಜಿ ಅವರ ಮನಸ್ಸಿನ ಮೇಲೆ ಪ್ರಭಾವಬೀರಿದ ವ್ಯಕ್ತಿಗಳು ಯಾರು ?

**ಉತ್ತರ:–**

______________________________________________________________________.

3 ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ಅಲಂಕರಿಸಿದ್ದ ಹುದ್ದೆ ಯಾವುದು?

**ಉತ್ತರ:–**

______________________________________________________________________

**ಆ. ಕೆಳಗಿನ ಪ್ರಶ್ನೆಗಳಿಗೆ 3/4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

4. ರಸೂಲ್ ಖಾನ್ ಅವರು ಡಿ ವಿ ಜಿ ಅವರ ವಿದ್ಯಾಭ್ಯಾಸಕ್ಕಾಗಿ ಮಾಡಿದ ಸಹಾಯವೇನು?

ಉತ್ತರ:_ ____________________________________________________________

______________________________________________________________________

______________________________________________________________________

**5.** ಎಲ್ಲರೊಂದಿಗೆ ಹೇಗೆ ಬಾಳಬೇಕೆಂದು ಡಿ ವಿ ಜಿ ಹೇಳಿದ್ದಾರೆ?

ಉತ್ತರ:______________________________________________________________

______________________________________________________________________

______________________________________________________________________

**ಇ. ಸಂದರ್ಭ ಸ್ವಾರಸ್ಯವನ್ನು ವಿವರಿಸಿ.**

1 "ನನ್ನ ಹತ್ತಿರ ಇರುವುದು ಒಂದೇ ಸೀರೆ "

______________________________________________________________________

______________________________________________________________________

______________________________________________________________________

______________________________________________________________________

**ಈ. ಲೇಖಕರ ಪರಿಚಯ – ಡಾ,ಲಕ್ಷ್ಮೀನಾರಾಯಣ ಭಟ್ಟ**

______________________________________________________________________

______________________________________________________________________

______________________________________________________________________

______________________________________________________________________

## ಪ್ರಥಮ ಭಾಷೆ-ಕನ್ನಡ 8ನೇ ತರಗತಿ ನವೆಂಬರ್ -2021
## ಗದ್ಯಪಾಠ: ಸಾರ್ಥಕ ಬದುಕಿನ ಸಾಧಕ - (ವ್ಯಾಕರಣ) ಅಭ್ಯಾಸದ ಹಾಳೆ-02

**ಅ. ಕೊಟ್ಟಿರುವ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಸರಿಯಾದುದನ್ನು ಆರಿಸಿ ಬರೆಯಿರಿ.**

1. 'ಶಾಲೆಗೆ' ಪದದಲ್ಲಿರುವ ವಿಭಕ್ತಿ ಪ್ರತ್ಯಯ ____________

   ಅ) ಪ್ರಥಮ-ಉ ಆ) ತೃತೀಯ- ಗೆ ಇ) ದ್ವಿತೀಯ- ಅನ್ನು ಈ) ಚತುರ್ಥಿ - ಗೆ

2. ಕಾರಕಾರ್ಥವನ್ನು ವಿಭಜಿಸಿ ಹೇಳುವ ಪ್ರತ್ಯಯಗಳೇ ______________

   ಅ) ವಿಭಕ್ತಿ ಪ್ರತ್ಯಯಗಳು ಆ)ಕಾರಾಕಾರ್ಥಗಳು ಇ) ವಿಭಕ್ತಿಗಳು ಈ) ಅವ್ಯಯಗಳು

**ಆ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1. ಕಾರ್ಯಗಳಲ್ಲಿ : ಸಪ್ತಮಿ : : ಮೆಟ್ಟಿಲನ್ನು : ________________
2. ಕಾನನ : ಕಾಡು : : ಇಳೆ : ________________
3. ಮೃಗ : ಮಿಗ : : ಧ್ವನಿ : ________________

**ಇ. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ .**

1. ಮಾತಂತು:- ______________________________
2. ಪರಮೋಚ್ಚ:- ______________________________
3. ಸಂಪನ್ನರಾದ:- ______________________________
4. ಶಿಕ್ಷಣವನ್ನು:- ______________________________

**ಈ. ಅದಲು ಬಲಾಗಿರುವ ಪದಗಳನ್ನು ಸರಿಯಾಗಿ ಜೋಡಿಸಿ ಅರ್ಥ ಪೂರ್ಣ ವಾಕ್ಯ ರಚಿಸಿ.**

1. ಕೂರಿಸುತ್ತೇನೆ ರೈಲಿನಲ್ಲಿ ಬೆಂಗಳೂರಿನ

**ಉತ್ತರ:-** ______________________________

2. ಮುಳಬಾಗಿಲು ಹುಟ್ಟೂರು ಡಿ.ವಿ.ಜಿ ಅವರ ಕೋಲಾರ ಸೇರಿದ ಜಿಲ್ಲೆಗೆ

**ಉತ್ತರ:-** ______________________________

3. ಆಧುನಿಕ ಸಾಹಿತ್ಯದ ಡಿ.ವಿ.ಜಿ ದಿಗ್ಗಜರಲ್ಲಿ ಕನ್ನಡ ಒಬ್ಬರು ಅವರು

**ಉತ್ತರ:-** ______________________________

4. ಕಳಿಸಿದ್ದಾರೆ? ಹಣ ಈ ನನಗೆ ಯಾಕೆ

**ಉತ್ತರ:-** ______________________________

**ಉ. ವಿಭಕ್ತಿ ಪ್ರತ್ಯಯವನ್ನು ಗುರುತಿಸಿ ಮಾದರಿಯಂತೆ ಬರೆಯಿರಿ.**

**ಮಾದರಿ:- ದಿವಾನರನ್ನು = ದಿವಾನರು+ ಅನ್ನು = ದ್ವಿತೀಯ ವಿಭಕ್ತಿ**

1) ಸಹಾಯಕ್ಕೆ :-
2) ಬಲದಿಂದ :-
3) ವಲಯದಲ್ಲಿ:-
4) ಮಂಕುತಿಮ್ಮನ :-
5) ತಂದೆಗೆ :-

**ಪ್ರಥಮ ಭಾಷೆ–ಕನ್ನಡ 8ನೇ ತರಗತಿ ನವೆಂಬರ್–2021**

**ಪದ್ಯಪಾಠ – ಭರವಸೆ – ಅಭ್ಯಾಸದ ಹಾಳೆ–01**

**ಅ. ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರವನ್ನು ಬರೆಯಿರಿ.**

1. ಕೋಗಿಲೆ ಕುಕಿಲ ರಾಗವನ್ನು ಯಾವಾಗ ಬೆರೆಸಿತು?

**ಉತ್ತರ:–** ____________________________________________.

2. ವಸಂತನ ಆಗಮನವನ್ನು ಸಾರಿದವರು ಯಾರು?

**ಉತ್ತರ:–** ____________________________________________.

3. ಯಾವುದು ಬರಡಲ್ಲ ಎಂದು ಕವಿಯತ್ರಿ ಹೇಳುತ್ತಾರೆ?

**ಉತ್ತರ:–** ____________________________________________

**ಆ. ಕೆಳಗಿನ ಪ್ರಶ್ನೆಗಳಿಗೆ 3/4 ವಾಕ್ಯಗಳಲ್ಲಿ ಉತ್ತರ ಬರೆಯಿರಿ.**

1. ಮಲ್ಲಿಗೆ ಕೋಗಿಲೆಯನ್ನು ಕರೆದು ಏನು ಹೇಳಿತು?

ಉತ್ತರ:_

____________________________________________

____________________________________________

____________________________________________

____________________________________________

**2**. ಕೋಗಿಲೆಯ ಆಶಾವಾದವೇನು?

ಉತ್ತರ:____________________________________________

____________________________________________

____________________________________________

____________________________________________

**ಇ. ಸಂದರ್ಭ ಸ್ವಾರಸ್ಯವನ್ನು ವಿವರಿಸಿ.**

1. "ನೈಜತೆಗೆ ಇಲ್ಲ ಬೆಲೆಯು"

____________________________________________

____________________________________________

____________________________________________

____________________________________________

____________________________________________

**ಈ. ಲೇಖಕರ ಪರಿಚಯ – ಬಿ.ಟಿ ಲಲಿತಾನಾಯಕ್**

____________________________________________

____________________________________________

____________________________________________

____________________________________________

____________________________________________

## ಪ್ರಥಮ ಭಾಷೆ ಕನ್ನಡ – ಎಂಟನೆಯ ತರಗತಿ – ನವೆಂಬರ್ –2021
## ಪದ್ಯಪಾಠ: ಭರವಸೆ – (ವ್ಯಾಕರಣ) ಅಭ್ಯಾಸದ ಹಾಳೆ–02

**ಅ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೇ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ.**

1) ಬಿತ್ತಿ : ಗೋಡೆ : : ಭ್ರಮರ : ________________

2) ಚಂದ್ರ : ಚಂದಿರ : : ಕೋಗಿಲೆ : ________________

**ಆ. ಕೊಟ್ಟಿರುವ ಪದಗಳನ್ನು ಬಿಡಿಸಿ ಬರೆದು ಸಂಧಿ ಹೆಸರಿಸಿ.**

1. ವಸಂತನಾಗಮನ :– ________________________________
2. ಹಾಡೊಂದು :– ________________________________
3. ಏನೆಂದು :– ________________________________
4. ಮನೆಯನ್ನು :– ________________________________

**ಇ. ಅದಲು ಬದಲಾಗಿರುವ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ಪದಗಳನ್ನು ಬರೆಯಿರಿ.**

1. ನ ಬಾ ಚಾ ಸಂ ಣಿ ರಿ

**ಉತ್ತರ :–** ______________________

2. ತ ಕ ಕೃ ಯ ತೆ

**ಉತ್ತರ:–** ______________________

3. ಅ ಭ ಲ್ಲಿ ನು ವ ದ

**ಉತ್ತರ:–** ______________________

4. ಗಾ ಲ ರಿ ನ ಹ

**ಉತ್ತರ:–** ______________________

5. ಡ ಒ ಗೆ ಬೇ ಲ

**ಉತ್ತರ:–** ______________________

6. ಕ ಲೋ ರ್ತೆ ನ್ನು ಯ ವಾ

**ಉತ್ತರ:–** ______________________

**ಈ. ಭರವಸೆ ಪದ್ಯದಲ್ಲಿ ಬಂದಿರುವ ಸಜಾತಿಯ ಮತ್ತು ವಿಜಾತಿಯ ಸಂಯುಕ್ತಾಕ್ಷರಗಳನ್ನು ಪಟ್ಟಿ ಮಾಡಿರಿ.**

| ಸಜಾತಿಯ ಸಂಯುಕ್ತಾಕ್ಷರಗಳು | ವಿಜಾತಿಯ ಸಂಯುಕ್ತಾಕ್ಷರಗಳು |
|---|---|
| | |
| | |
| | |
| | |
| | |

**ಉ. ಕೆಳಗಿನ ಪದ್ಯಭಾಗದ ಸಾಲುಗಳನ್ನು ಕ್ರಮ ಬದ್ಧವಾಗಿ ಬರೆಯಿರಿ.**

ಲೋಕವಾರ್ತೆಯದೇನು ಅರುಹೆ

ಪ್ರಿಯ ಗೆಳತಿ ಹಾಡೊಂದ ಹಾಡೆ

ಬಾನ ಸಂಚಾರಿಣಿಯೆ ಅನುಭವದ ಹೊನ್ನಗಣಿಯೆ

ಬಳುಕಾಡಿ ಮಲ್ಲಿಗೆಯು ಕೋಗಿಲೆಯ ಕರೆದಿತ್ತು